# WORLD NO TOBACCO DAY

## 31-05-2022







ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಐ.ಕ್ಯೂ.ಎ.ಸಿ, ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್,
ದಿ ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಪಠ್ಯೇತರ ಚಟುವಟಿಕೆಗಳ ಸಮಿತಿಗಳ
ಸಹಯೋಗದೊಂದಿಗೆ
ವಿಶ್ವ ತಂಬಾಕು ರಹಿತ ದಿನಾಚರಣೆ
ಸ್ಥಳ: ಕೊಠಡಿ ಸಂಖ್ಯೆ: 02
ದಿನಾಂಕ: 31.05.2022
ಸಮಯ: 1.00 ಗಂಟೆ












ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರೆಡ್ ಕ್ರಾಸ್ ಘಟಕದ ವತಿಯಿಂದ **ಮೇ 31 ರಂದು ವಿಶ್ವ ತಂಬಾಕು ರಹಿತ ದಿನಾಚರಣೆಯನ್ನು ಆಚರಿಸಲಾಯಿತು.** ಇದರ ಪ್ರಯುಕ್ತ ವಿದ್ಯಾರ್ಥಿಗಳಿಗೆ **"ತಂಬಾಕು ಪರಿಸರಕ್ಕೆ ಮಾರಕ"** ಎಂಬ ವಿಷಯದ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರು ವಹಿಸಿದ್ದರು ಮತ್ತು ರಾ.ಸೇ.ಯೋ ಅಧಿಕಾರಿ ಪ್ರೊ ಸತೀಶ್ ಟಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರಾಂಶುಪಾಲರು ವಿದ್ಯಾರ್ಥಿಗಳನ್ನು ಕುರಿತು ಇಂದು ವಿಶ್ವ ತಂಬಾಕು ರಹಿತ ದಿನವಾಗಿದ್ದು ಜಗತ್ತನ್ನು ಇಂದು ಕಾಡುತ್ತಿರುವ ಮಾದಕ ವಸ್ತು ತಂಬಾಕು ಜನರ ಬದುಕನ್ನು ಅದೋಗತಿಗೆ ತಳ್ಳುತ್ತಿದೆ. ಸಿಗರೇಟು ಸೇವನೆ, ತಂಬಾಕು ಜಗಿಯುವುದು ಮುಂತಾದ ವ್ಯಸನಗಳಿಂದ ಯುವ ಸಮೂಹ ಬದುಕು ಕಳೆದುಕೊಳ್ಳುತ್ತಿದೆ. ಮಾನವ, ಚಟಗಳಿಂದ ಮುಕ್ತನಾದಾಗ ಮಾತ್ರ ಬದುಕು ಹಸನಾಗುತ್ತದೆ. ತಂಬಾಕಿನ ಸೇವನೆಯಿಂದ ಮನುಷ್ಯನ ನರವ್ಯವಸ್ಥೆ, ಮೆದುಳು, ಶ್ವಾಸಕೋಶ ಹಾನಿಗೊಂಡು ಕ್ಯಾನ್ಸರ್‌ಗೆ ತುತ್ತಾಗುತ್ತಿರುವುದು ದುರಂತದ ಸಂಗತಿಯೆ ಸರಿ. ತಂಬಾಕು ದುಶ್ಚಟಗಳಿಂದ ಯುವ ಸಮೂಹವು ದೂರವಿರಬೇಕೆಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.